

# ರೆಕ್ಕೆಗಳನ್ನು ಕೊಡು....

ಎಲ್ಲಿಗೂ ಹೋಗಕೂಡದು
ಕೂಡದು ಎಂದರೆ ಕೂಡದು
ಅಪ್ಪನ ಆದೇಶ
ಜೋಪಾನ, ಕತ್ತಲಾಗುವ
ಮುನ್ನ ಮನೆ ಸೇರಿಕೋ....
ಅಮ್ಮನ ಉಪದೇಶ
ಅಣ್ಣ : ಎಲ್ಲಿಗೊ ಸವಾರಿ?
ಬೈಕಿನಲ್ಲಿ ಬಿಡಲೆ?
ತಮ್ಮ:ನಾನೂ ಬರಲೆ, ಜತೆಗೆ ಇರಲೆ?
+++
ಹೊಸಲೇನೋ ದಾಟಿದೆ,
ಇಟ್ಟಿದ್ದೆನೋ ಇಲ್ಲವೋ
ಒಂದೆರಡು ಹೆಜ್ಜೆ....
ಗೆಜ್ಜೆ ಝುಣಗುಟ್ಟಿಸಿ ಸೇರೊದ್ದೆ!
ಮನೆ ತುಂಬಿಸಿಕೊಂಡರು

ಇದೀಗ ಬೆನ್ನ ಇರಿಯುತ್ತಿವೆ ಪತಿದೇವರ ಕಣ್ಣುಗಳು
ಮಗ ಒಡಲಿಗೊಯುತ್ತಿದ್ದಾನೆ...
ನನಗೆ ರೆಕ್ಕೆಗಳನ್ನಾದರೂ ಕೊಟ್ಟಿದ್ದಿದ್ದರೆ?

# ಎದೆಯು ಹಿಗ್ಗಿತು

ರೊಕ್ಕದ ಯಂತ್ರ ನೆಲ ಬಗೆದಿತ್ತು
ಕಲ್ಲು ಮಣ್ಣು ಚಿಮ್ಮಿ
ಎಲ್ಲೆಲ್ಲೂ ಧೂಳು
ರಕ್ಕಸ ಯಂತ್ರದ ಆರ್ಭಟವ ಭೇದಿಸಿತು
ಮಗುವಿನಳು
ಕುಕ್ಕೆ ಕುಕ್ಕಿ ಓಡಿದಳಾ ತಾಯಿ
ಎತ್ತಿಕೊಂಡಳು
ಒತ್ತಿಕೊಂಡಳು ಎದೆಗೆ
ಬತ್ತಿದ ಮೊಲೆಗೆ ಬಾಯಿಕ್ಕಿ ಸಗ್ಗ
ಸೂರೆಗೈದಂತೆ ಕಿಲಕಿಲ
ನಕ್ಕಿತು ಕೂಸು....
ಹಾಲಿನ ಹೊಳೆ ಹರಿಯಿತು !!

